## ನಿಮ್ಮೊಡನೆ

# ಹೆಣ್ಣುಮಗು ಉಳಿಸಿ..

ಹೆಣ್ಣುಮಗುವನ್ನು 'ಭಾಗ್ಯಲಕ್ಷ್ಮಿ' ಎಂದು ಅಲಂಕಾರಿಕವಾಗಿ ಎತ್ತರಕ್ಕೇರಿಸಿದರಷ್ಟೇ ಸಾಲದು. ಹುಟ್ಟುವ ಹಕ್ಕು ಕಳೆದುಕೊಳ್ಳುತ್ತಾ, ಸುರಕ್ಷಿತ ಬಾಳುವೆಯ ಹಕ್ಕನ್ನೂ ಕಳೆದುಕೊಳ್ಳುತ್ತಿರುವ ಹೆಣ್ಣುಮಗುವಿನ ಕುರಿತಾದ ದೃಷ್ಟಿಕೋನ ಮಾರ್ಪಾಡಿಗೆ ಸಾಮಾಜಿಕವಾಗಿ ದೊಡ್ಡ ಪರಿವರ್ತನೆಯೇ ಆಗಬೇಕಾದ ಕಾಲ ಸನ್ನಿಹಿತವಾಗಿದೆ.

ಕುಟುಂಬ ಎಂಬುದು ಭಾರತೀಯ ಸಮಾಜದಲ್ಲಿ ಪ್ರೀತಿ, ವಾತ್ಸಲ್ಯ, ಸುರಕ್ಷತೆಯ ತಾಣ. ಆದರೆ ಹೆಣ್ಣುಮಗುವಿಗೆ ಇದೇ ಕುಟುಂಬ– ಹಿಂಸೆ, ದೌರ್ಜನ್ಯದ ತಾಣವೂ ಆಗುತ್ತಿರುವುದು ದುರದೃಷ್ಟಕರ. ಜನ್ಮ ಕೊಟ್ಟ ತಂದೆಯೇ ಹೆಣ್ಣುಮಕ್ಕಳ ಪಾಲಿಗೆ ಯಮನಾಗುತ್ತಿರುವ ವರದಿಗಳಂತೂ ಕುಟುಂಬದೊಳಗಿನ ಹಿಂಸೆಯನ್ನು ಬಹಿರಂಗಪಡಿಸಿವೆ. ಬೆಂಗಳೂರಿನಲ್ಲಿ ಸ್ವಂತ ತಂದೆಯ ದೌರ್ಜನ್ಯದಿಂದ ಪ್ರಾಣ ಕಳೆದುಕೊಂಡ ಮೂರು ತಿಂಗಳ ಹಸುಳೆ ನೇಹಾ ಅಫ್ರೀನ್‌ಳ ಪ್ರಕರಣ, ಆಂಧ್ರಪ್ರದೇಶದಲ್ಲಿ ವರದಕ್ಷಿಣೆ ಉಳಿಸಲು ತನ್ನಿಬ್ಬರು ಹೆಣ್ಣುಮಕ್ಕಳನ್ನು ತಂದೆಯೇ ಹತ್ಯೆಗೈದ ಪ್ರಕರಣ, ಗ್ವಾಲಿಯರ್‌ನಲ್ಲಿ ಎರಡು ದಿನದ ಹೆಣ್ಣು ಹಸುಗೂಸಿಗೆ ತಂದೆಯೇ ನಿಕೋಟಿನ್ ಕೊಟ್ಟು ಸಾಯಿಸಿದ ಪ್ರಕರಣಗಳು ಕುಟುಂಬಗಳೊಳಗೆ ಹಾಸುಹೊಕ್ಕಾಗಿರುವ ತಣ್ಣನೆಯ ಕ್ರೌರ್ಯದ ಎಳೆಗಳನ್ನು ದರ್ಶನ ಮಾಡಿಸುತ್ತಿವೆ.

ಈ ಸರಣಿ ಪ್ರಕರಣಗಳು ಸೂಚಿಸುತ್ತಿರುವುದಾದರೂ ಏನು? ಕುಲದೀಪಕ ಗಂಡು ಮಗು ಬೇಕು; ಹೆಣ್ಣು ಮಗು ಬೇಡ ಎಂಬಂತಹ ಮನಸ್ಥಿತಿಯನ್ನು. 'ಕುಟುಂಬದ ಕಣ್ಣು' ಎಂದು ಹೆಣ್ಣನ್ನು ಹಾಡಿ ಹೊಗಳುವ ನಮ್ಮ ಸಮಾಜ, ಗಂಡಿಗೆ 'ಕುಟುಂಬದ ಯಜಮಾನ'ನ ಪಟ್ಟ ಕಟ್ಟುತ್ತದೆ. ಕುಟುಂಬ ದೊಳಗಿನ ಈ ಅಧಿಕಾರ ಸಂಬಂಧಗಳಲ್ಲಿ ನಲುಗುವುದು ಹೆಣ್ಣು ಮಗುವಿನ ಕುರಿತಾದ ದೃಷ್ಟಿಕೋನ. ಸಮಾಜದಲ್ಲಿ ಪೆಡಂಭೂತವಾಗಿರುವ ವರದಕ್ಷಿಣೆಯ ಸಮಸ್ಯೆ ಹೆಣ್ಣು ಮಗುವನ್ನು ಮತ್ತಷ್ಟು ಅಪಮೌಲ್ಯ ಗೊಳಿಸುತ್ತದೆ. ಇದು ಹೆಣ್ಣು ಮಗುವಿನ ವಿರುದ್ಧದ ಹಿಂಸೆ, ದೌರ್ಜನ್ಯಗಳಿಗೆ ನಾಂದಿಯಾಗುತ್ತಿದೆ.

ಈ ದೌರ್ಜನ್ಯ ಹೆಣ್ಣು ಮಗು ಗರ್ಭದಲ್ಲಿರುವಾಗಲೇ ಆರಂಭವಾಗುತ್ತದೆ. ಹೆಣ್ಣು ಮಗು ಹುಟ್ಟುವುದೇ ಬೇಡ ಎಂದು ಅನೇಕ ಕುಟುಂಬಗಳು ಬಯಸುತ್ತವೆ. ಹೀಗಾಗಿ ಗರ್ಭದಲ್ಲಿನ ಹೆಣ್ಣು ಭ್ರೂಣವನ್ನು ಹೊಸಕಿ ಹಾಕಿ ಹುಟ್ಟುವ ಹಕ್ಕನ್ನೇ ಕಿತ್ತುಕೊಳ್ಳಲಾಗುತ್ತದೆ. ಹೆಣ್ಣುಮಗುವಿನ ವಿರುದ್ಧದ ಪೂರ್ವಗ್ರಹ ತಲುಪಿರುವಂತಹ ಅತಿರೇಕದ ಮಟ್ಟಕ್ಕೆ ದ್ಯೋತಕ ಇದು. ಅಷ್ಟೇ ಅಲ್ಲ, ಗರ್ಭ ಧರಿಸುವ ಮುಂಚೆಯೇ ಲಿಂಗ ಆಯ್ಕೆಯ ಮತ್ತೊಂದು ಅತಿರೇಕವೂ ನಮ್ಮ ಸಮಾಜದಲ್ಲಿ ಪ್ರಚಾರ ಪಡೆಯುತ್ತಿದೆ. ಎಂದರೆ, ಆಧುನಿಕ ತಂತ್ರಜ್ಞಾನಗಳ ಬೆಳವಣಿಗೆಗಳ ದುರ್ಬಳಕೆ ಸೃಷ್ಟಿಸುತ್ತಿರುವಂತಹ ಅಸ್ವಸ್ಥ ಸಮಾಜದ ಒಂದು ಮುಖ ಇದು. ಇಷ್ಟೆಲ್ಲಾ ಪೂರ್ವಗ್ರಹಗಳ ತೊಟ್ಟಿಲಲ್ಲೂ ಹೆಣ್ಣುಮಗು ಜನ್ಮತಾಳಿದಲ್ಲಿ, ಅದು ಐದು ವರ್ಷವಾಗುವ ವೇಳೆಗೇ ಸಾಯುವ ಪ್ರಮಾಣ ನಮ್ಮ ದೇಶದಲ್ಲಿ ಹೆಚ್ಚೇ ಇದೆ. ಇದಕ್ಕೆ ಕಾರಣ, ಮತ್ತೆ ಹೆಣ್ಣುಮಗುವಿನ ಕುರಿತಾಗಿ ಕುಟುಂಬಗಳಲ್ಲಿರುವ ಅನಾದರ. ಊಟೋಪಚಾರಗಳಿಂದ ಹಿಡಿದು ಆರೋಗ್ಯದ ಬಗ್ಗೆ ವಹಿಸಬೇಕಾದ ಕಾಳಜಿಗಳವರೆಗೆ ತಾರತಮ್ಯ ಎದ್ದು ಕಾಣುತ್ತದೆ. 'ಹೆಣ್ಣುಮಕ್ಕಳು ತಿಪ್ಪೆಯ ಹಾಗೆ ಬೆಳೆಯುತ್ತಾರೆ' ಎಂಬಂತಹ ಗಾದೆಮಾತು ಹೆಣ್ಣುಮಗುವಿನ ಕುರಿತಾಗಿ ನಮ್ಮ ಕುಟುಂಬಗಳಲ್ಲಿರುವ ನಿಕೃಷ್ಟ ಭಾವನೆಗೆ ದ್ಯೋತಕ.

ಹೆಚ್ಚಿನ ಶಿಕ್ಷಣಕ್ಕೆಂದು ಹೆಣ್ಣುಮಕ್ಕಳಿಗೆ ಹಣ ವ್ಯಯ ಮಾಡುವುದು ವ್ಯರ್ಥ ಎಂಬುದು ಶೇಕಡ 43ರಷ್ಟು ವಿದ್ಯಾರ್ಥಿಗಳ ಅಭಿಪ್ರಾಯ. ರಾಷ್ಟ್ರದ ಪ್ರಮುಖ ನಗರಗಳ ಪ್ರತಿಷ್ಠಿತ ಶಾಲೆಗಳಲ್ಲಿ ಕಲಿಯುವ ಅತಿಗಣ್ಯ ಸಾಮಾಜಿಕ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಇತ್ತೀಚೆಗೆ ನಡೆಸಲಾದ ಸಮೀಕ್ಷೆಯೊಂದರಲ್ಲಿ ವ್ಯಕ್ತಪಡಿಸಿರುವ ಈ ಅಭಿಪ್ರಾಯ ಆಘಾತಕಾರಿ. ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆಗಳ ಶಿಖರಗಳೇರುತ್ತಿರುವ ಈ ಕಾಲದಲ್ಲೂ ಆಳವಾಗಿ ಬೇರೂರಿರುವ ಪೂರ್ವಗ್ರಹಗಳಿಗೆ ಇದು ನಿದರ್ಶನವಲ್ಲದೆ ಮತ್ತೇನು?

ಚೆನ್ನಾಗಿ ಓದುತ್ತಿಲ್ಲವೆಂದು ಮಗಳಿಗೆ ಭಿಕ್ಷೆ ಬೇಡುವ ಶಿಕ್ಷೆ ನೀಡಿದ ಮೈಸೂರಿನ ತಂದೆಯ ಕಥೆ, ಕುಟುಂಬದೊಳಗಿನ ದೌರ್ಜನ್ಯದ ಮತ್ತೊಂದು ಮುಖವನ್ನು ಅನಾವರಣಗೊಳಿಸುತ್ತದೆ. ಇನ್ನು ಕುಟುಂಬದ ಸದಸ್ಯರಿಂದಲೇ ಲೈಂಗಿಕವಾಗಿ ಶೋಷಿತವಾಗುವ ಹೆಣ್ಣುಮಕ್ಕಳ ಕಥೆಗಳೂ ಮಾಮೂಲು. ಕುಟುಂಬಗಳಲ್ಲಿನ 'ಯಜಮಾನ ಸಂಸ್ಕೃತಿ' – ಪ್ರೀತಿ, ವಾತ್ಸಲ್ಯ, ಅಂತಃಕರಣಗಳ 'ಸಹಜೀವನದ ಸಂಸ್ಕೃತಿ'ಯಾಗಿ ಬದಲಾಗಬೇಕಿರುವ ಅವಶ್ಯಕತೆಯನ್ನು ಈ ಎಲ್ಲಾ ಬೆಳವಣಿಗೆಗಳೂ ಸೂಚಿಸುತ್ತಿವೆ. ಭಾರತೀಯ ಸಂಸ್ಕೃತಿಯ ಕೌಟುಂಬಿಕ ಮೌಲ್ಯಗಳ ನಿಜವಾದ ಆದರ್ಶ ಕಟ್ಟಕಡೆಗೆ ಅದೇ ಅಲ್ಲವೆ?

ಸರಿಯಾಗಿ ಜಾರಿಯಾಗದ ಆಸ್ತಿಹಕ್ಕು, ವರದಕ್ಷಿಣೆ ಸಮಸ್ಯೆ, ಅರ್ಥವ್ಯವಸ್ಥೆಗೆ ಮಹಿಳೆಯರ ಕೊಡುಗೆಯ ಅಗೋಚರತೆ– ಇವೆಲ್ಲವೂ ಹೆಣ್ಣುಮಕ್ಕಳನ್ನು ಕೀಳಾಗಿ ಪರಿಗಣಿಸುವುದಕ್ಕೆ ಕಾರಣವಾಗಿದೆ. ಈ ಸಮಸ್ಯೆಗಳ ನಿವಾರಣೆಗೆ ಆದ್ಯತೆ ಸಿಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಹೆಣ್ಣುಮಗುವನ್ನು 'ಭಾಗ್ಯಲಕ್ಷ್ಮಿ' ಎಂದು ಅಲಂಕಾರಿಕವಾಗಿ ಎತ್ತರಕ್ಕೇರಿಸಿದರಷ್ಟೇ ಸಾಲದು. ಹುಟ್ಟುವ ಹಕ್ಕು ಕಳೆದುಕೊಳ್ಳುತ್ತಾ, ಸುರಕ್ಷಿತ ಬಾಳುವೆಯ ಹಕ್ಕನ್ನೂ ಕಳೆದುಕೊಳ್ಳುತ್ತಿರುವ ಹೆಣ್ಣುಮಗುವಿನ ಕುರಿತಾದ ದೃಷ್ಟಿಕೋನ ಮಾರ್ಪಾಡಿಗೆ ಸಾಮಾಜಿಕವಾಗಿ ದೊಡ್ಡ ಪರಿವರ್ತನೆಯೇ ಆಗಬೇಕಾದ ಕಾಲ ಸನ್ನಿಹಿತವಾಗಿದೆ. ಇಲ್ಲದಿದ್ದಲ್ಲಿ ಮುಂಬರುವ ನಾಳೆಗಳು ಗಂಡು–ಹೆಣ್ಣು ಅನುಪಾತದ ತೀವ್ರ ಅಸಮತೋಲನದಲ್ಲಿ ನಲುಗಲಿವೆ.

■ ಸಿ. ಜಿ. ಮಂಜುಳಾ

